## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ

## ಸಿ ಸಿ ನಂ.1948/2022

**ಫಿರ್ಯಾದುದಾರರು** ಃ- ರಾಜ್ಯ ಪೋಲೀಸರು, ಬೆಳಕವಾಡಿ ಪೊಲೀಸ್ ಠಾಣೆ,
ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

ಃ ವಿರುದ್ಧ ಃ

**ಆರೋಪಿತರು** ಃ-
1) ಶ್ರೀ ಕೃಷ್ಣ ಬಿನ್ ಲೇಟ್ ದುಂಡಯ್ಯ,
60 ವರ್ಷಗಳು,
2) ಶ್ರೀಮತಿ ಸಾವಿತ್ರಮ್ಮ ಕೋಂ ಕೃಷ್ಣ
44 ವರ್ಷಗಳು,
3) ಶ್ರೀ ಪ್ರೇಮ್ ಕುಮಾರ್ ಬಿನ್ ಕೃಷ್ಣ
26 ವರ್ಷಗಳು,
4) ಶ್ರೀ ಚಂದ್ರಶೇಖರ್ ಹೆಚ್.ಸಿ. ಬಿನ್ ಲೇಟ್ ಚಿಕ್ಕಯ್ಯ,
25 ವರ್ಷಗಳು,
5) ಶ್ರೀಮತಿ ಅನಿತ ಕೆ. ಕೋಂ ವಿನೋದಕುಮಾರ್
36 ವರ್ಷಗಳು,
1 ರಿಂದ 5 ರವರ ವಾಸಃ
ಹೊಸಹಳ್ಳಿ ಗ್ರಾಮ, ಮಳವಳ್ಳಿ ತಾಲ್ಲೂಕು,
ಮಂಡ್ಯ ಜಿಲ್ಲೆ.

6) ಶ್ರೀಮತಿ ಅಭಿಲಾಷ ಹೆಚ್.ಸಿ. ಕೋಂ ಆನಂದ್ ಎಸ್.
29 ವರ್ಷಗಳು,
ವಾಸಃ ಸಂತೆಮೊಗನಹಳ್ಳಿ ಗ್ರಾಮ,
ಚನ್ನಪಟ್ಟಣ ತಾಲ್ಲೂಕು,
ರಾಮನಗರ ಜಿಲ್ಲೆ.

## -ಃ ದೋಷಾರೋಪಣೆ ಃ-

ಸಚಿನ್ ಕುಮಾರ್ ಶಿವಪೂಜಿ, ಬಿ.ಎ.ಎಲ್., ಎಲ್ ಎಲ್ ಬಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಆದ ನಾನು ನಿಮ್ಮಗಳ ವಿರುದ್ಧ ಹೊರಸಿರುವ ದೋಷಾರೋಪಣೆ ಏನೆಂದರೆ ಃ

**ದಿನಾಂಕಃ 29.04.2022 ರಂದು ಬೆಳಿಗ್ಗೆ 08.00 ಗಂಟೆಯ ಸಮಯದಲ್ಲಿ ಮಳವಳ್ಳಿ ತಾಲ್ಲೂಕು, ಬಿ.ಜಿ.ಪುರ ಹೋಬಳಿ ಹೊಸಹಳ್ಳಿ ಗ್ರಾಮದ ಸಾಕ್ಷಿ-01 ರವರ ಮನೆಯ ಮುಂಭಾಗದ ಕಾಂಕ್ರೀಟ್ ರಸ್ತೆಯಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಈ ಹಿಂದೆ ಸಾಕ್ಷಿ-01 ರವರು ನೀಡಿದ ಹಣದ ವಿಚಾರದಲ್ಲಿ ಅಕ್ರಮಗುಂಪು ಕಟ್ಟಿಕೊಂಡು ಬಂದು ಸಾಕ್ಷಿ-1 ಮತ್ತು ಸಾಕ್ಷಿ-02 ರವರಿಗೆ ಅವಾಚ್ಯ ಶಬ್ದಗಳಿಂದ**

ಸಾರ್ವಜನಿಕ ನೆಮ್ಮದಿಗೆ ಭಂಗ ಉಂಟಾಗುವಂತೆ ಬೈದು ಭಾರತ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯಾಳಗೆ ಮಾಡಿದ್ದೀರೆಂದು ಹಾಗೂ

ಅದೇ ದಿನ, ಅದೇ ಸ್ಥಳ ಹಾಗೂ ಅದೇ ಸಮಯದಲ್ಲಿ, 1,2,5 ಮತ್ತು 6 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಸಾಕ್ಷಿ-01 ರವರನ್ನು ಕೆಳಕ್ಕೆ ತಳ್ಳಿದ್ದು, 5 ನೇ ಆರೋಪಿಯಾದ ನೀವು ಸಾಕ್ಷಿ-01 ರವರ ಹೊಟ್ಟೆಯ ಮೇಲೆ ತುಳಿದು ಹಲ್ಲೆ ಮಾಡಿ, ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿ ಭಾರತ ದಂಡ ಸಂಹಿತೆ ಕಲಂ.323 ಸಹವಾಚಕ ಕಲಂ. 149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯಾಳಗೆ ಮಾಡಿದ್ದೀರೆಂದು ಹಾಗೂ

ಅದೇ ದಿನ, ಅದೇ ಸ್ಥಳ ಹಾಗೂ ಅದೇ ಸಮಯದಲ್ಲಿ, 3 ಮತ್ತು 4 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಮನೆಯ ಹೊರಗಡೆ ಇದ್ದ ಸಾಕ್ಷಿ-02 ರವರ ತಲೆಯ ಕೂದಲನ್ನು ಹಿಡಿದು ಎಳೆದಾಡಿ ಕೈಗಳಿಂದ ಮುಖದ ಮೇಲೆ ಹೊಡೆದು ಆಕೆಯ ಚೂಡಿದಾರ್ ಟಾಪ್ ನ್ನು ಹಿಡಿದು ಎಳೆದಾಡಿ ಹರಿದು ಹಾಕಿ ಹೊಡೆಯುತ್ತಿದ್ದಾಗ ಸಾಕ್ಷಿ-01 ರವರು ಮನೆಯೊಳಗಡೆಯಿಂದ ಓಡಿ ಬಂದು ಕಿರುಚಿಕೊಂಡಾಗ 1 ನೇ ಆರೋಪಿಯಾದ ನೀವು ಸಾಕ್ಷಿ-01 ರವರು ಹಾಕಿದ್ದ ನೈಟಿಯನ್ನು ಹಿಡಿದು ಎಳೆದಾಡಿ ಹರಿದುಹಾಕಿ ಸಾಕ್ಷಿ-1 ಮತ್ತು ಸಾಕ್ಷಿ-02 ರವರ ಮಾನಕ್ಕೆ ಕುಂದುಂಟು ಮಾಡಿ ಭಾರತ ದಂಡ ಸಂಹಿತೆ ಕಲಂ.354(ಬಿ) ಸಹವಾಚಕ ಕಲಂ. 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯಾಳಗೆ ಮಾಡಿದ್ದೀರೆಂದು ಹಾಗೂ

ಅದೇ ದಿನ, ಅದೇ ಸ್ಥಳ ಹಾಗೂ ಅದೇ ಸಮಯದಲ್ಲಿ, ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು, ಅಕ್ರಮ ಕೂಟದ ಸದಸ್ಯರಾಗಿ. ಭಾರತ ದಂಡ ಸಂಹಿತೆ ಕಲಂ.143 ಸಹವಾಚಕ ಕಲಂ. 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯಾಳಗೆ ಮಾಡಿದ್ದೀರೆಂದು ಹಾಗೂ

ಅದೇ ದಿನ. ಅದೇ ಸ್ಥಳ ಹಾಗೂ ಅದೇ ಸಮಯದಲ್ಲಿ. 5 ನೇ ಆರೋಪಿಯಾದ ನೀವು ಸಮಾನ ಉದ್ದೇಶದಿಂದ ಸಾಕ್ಷಿ-02 ರವರಿಗೆ " ಊರಿನಲ್ಲಿ ನಿನ್ನ ಮಾನ ಕಳೆಯುತ್ತೇವೆ, ನೀನು ಮದುವೆಯಾಗದ ಹಾಗೆ ಮಾಡುತ್ತೇವೆ " ಎಂದು ಕೊಲೆ ಬೆದರಿಕೆ ಹಾಕಿ ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯಾಳಗೆ ಮಾಡಿರುವಿರಿ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಮಳವಳ್ಳಿ.

ದಿನಾಂಕ:27.12.2023

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ**

**ಸಿ ಸಿ ನಂ.1948/2022**

**ಫಿರ್ಯಾದುದಾರರು ಃ- ಬೆಳಕವಾಡಿ ಪೊಲೀಸ್ ಠಾಣೆ**

ಃ ವಿರುದ್ಧ ಃ

**ಆರೋಪಿ ಃ-**

**ಪ್ರಶ್ನೆಃ- 1) ಮೇಲ್ಕಂಡಂತೆ ಓದಿ ಹೇಳಿದ ದೋಷಾರೋಪಣೆ ನಿಮಗೆ ತಿಳಿಯಿತೆ?**

**ಉತ್ತರಃ-** ತಿಳಿಯಿತು

**ಪ್ರಶ್ನೆಃ- 2) ಮೇಲ್ಕಂಡ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತೀರಾ?**

**ಉತ್ತರಃ** ವಿಚಾರಣೆಯಾಗಬೇಕು

**(ಮೇಲ್ಕಂಡಂತೆ ದೋಷರೋಪಣೆಯನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ್ದು, ಆರೋಪಿ ನೀಡುವ ಉತ್ತರವನ್ನು ಯಥಾವತ್ತಾಗಿ ನಾನೇ ಸ್ವತಃ ಬರೆದುಕೊಂಡಿರುವುದು ನಿಜವೆಂದು ದೃಢಿಕರಿಸುತ್ತೇನೆ.)**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ

**ದಿನಾಂಕಃ27.12.2023** **ಮಳವಳ್ಳಿ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ**

**ಸಿ ಸಿ ನಂ.1948/2022**

**ಫಿರ್ಯಾದುದಾರರು ಃ- ಬೆಳಕವಾಡಿ ಪೊಲೀಸ್ ಠಾಣೆ**

ಃ ವಿರುದ್ಧ ಃ

**ಆರೋಪಿ ಃ-**

**ಪ್ರಶ್ನೆಃ- 1) ಮೇಲ್ಕಂಡಂತೆ ಓದಿ ಹೇಳಿದ ದೋಷಾರೋಪಣೆ ನಿಮಗೆ ತಿಳಿಯಿತೆ?**

**ಉತ್ತರಃ-** ತಿಳಿಯಿತು

**ಪ್ರಶ್ನೆಃ- 2) ಮೇಲ್ಕಂಡ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತೀರಾ?**

**ಉತ್ತರಃ** ವಿಚಾರಣೆಯಾಗಬೇಕು

**(ಮೇಲ್ಕಂಡಂತೆ ದೋಷರೋಪಣೆಯನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ್ದು, ಆರೋಪಿ ನೀಡುವ ಉತ್ತರವನ್ನು ಯಥಾವತ್ತಾಗಿ ನಾನೇ ಸ್ವತಃ ಬರೆದುಕೊಂಡಿರುವುದು ನಿಜವೆಂದು ದೃಢಿಕರಿಸುತ್ತೇನೆ.)**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ

**ದಿನಾಂಕಃ27.12.2023** **ಮಳವಳ್ಳಿ.**